ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ,
ಚಿಕ್ಕಮಗಳೂರು

<u>ಸತ್ರ ಮೊಕದ್ದಮೆ ಸಂಖ್ಯೆ: **2/2021**</u>

ಫಿರ್ಯಾದುದಾರರು: ಸರ್ಕಾರದ ಪರವಾಗಿ ಜಯಪುರ ಪೊಲೀಸ್.

-ವಿರುದ್ಧ-

ಆರೋಪಿತರು ಶ್ರೀರಾಜ್ ಯಾನೆ ಅಣ್ಣಯ್ಯ

<u>ದಂಡ ಪ್ರಕ್ರಿಯಾ ಸಂಹಿತೆಯ ಕಲಂ **313** ರ ಅಡಿಯಲ್ಲಿ ಆರೋಪಿಯ ಹೇಳಿಕೆ</u>

ಪ್ರಶ್ನೆ-1 ಅಭಿಯೋಗದವರು 14 ಜನ ಸಾಕ್ಷಿದಾರರನ್ನು ವಿಚಾರಣೆ ಮಾಡಿದ್ದು, ಅವರ ನುಡಿ ಸಾಕ್ಷ್ಯವನ್ನು ಕೇಳಿರುವಿರಾ?

ಉತ್ತರ:- ಕೇಳಿಸಿಕೊಂಡಿದ್ದೇನೆ

ಪ್ರಶ್ನೆ:2- ಪ್ರಾಸಾ.1 ಸುರೇಶ , ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ, ದಿನಾಂಕ: 12-02-2019 ರಂದು, ನಾಗರತ್ನ ಅವರು ಹೊಟ್ಟೆ ನೋವು ಎಂದು ಹೇಳಿದ್ದು , ಅವರನ್ನು ಕೊಪ್ಪ ಸರ್ಕಾರಿ ಆಸ್ಪತ್ರೆಗೆ ಕರೆದೊಯ್ಯಲಾಯಿತು, ಹೊಟ್ಟೆ ನೋವು ಕಡಿಮೆ ಆದ ಕಾರಣ ವಾಪಾಸು ಮನೆಗೆ ಕರೆ ತಂದೆವು ಎಂದು, ದಿನಾಂಕ: 13-02-2019 ರಂದು ಬಂಡಿಗಡಿ ಸಮೀಪ ಇರುವ ಹೊಸೂರಿನ ದೇವಸ್ಥಾನಕ್ಕೆ ಹೋಗಿದ್ದೆವು, ಪೂಜೆ ಮುಗಿಸಿಕೊಂಡು ವಾಪಾಸು ಮನೆಗೆ ಬರುತ್ತಿರುವಾಗ ನಾಗರತ್ನಳಿಗೆ ಪುನ: ಹೊಟ್ಟೆ ನೋವು ಆಯಿತು, ಅಲ್ಲಿಂದ ಕೊಪ್ಪದ ಸರ್ಕಾರಿ ಆಸ್ಪತ್ರೆಗೆ ಕರೆದೊಯ್ದೆವು, ಅಲ್ಲಿ ಔಷಧಿ ಕೊಟ್ಟರು, ಹೊಟ್ಟೆ ನೋವು ಕಡಿಮೆ ಆಯಿತು, ಅದೇ ದಿನ ಸಾಯಂಕಾಲ ವಾಪಾಸು ಮನೆಗೆ ಕರೆ ತಂದೆವು. ಮನೆಗೆ ಬಂದ ನಂತರ ಪುನ: ಹೊಟ್ಟೆ ನೋವು ಎಂದು ಹೇಳಿದಳು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ:- ಸುಳ್ಳು

ಪ್ರಶ್ನೆ:3- ಪ್ರಾಸಾ.1 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು, ದಿನಾಂಕ: 14-02-2019 ರಂದು ಬೆಳಿಗ್ಗೆ ನಾಗರತ್ನಳಿಗೆ ಬ್ಲೀಡಿಂಗ್ ಆಗುತ್ತಿತ್ತು, ಜಯಪುರದ ಸರ್ಕಾರಿ ಆಸ್ಪತ್ರೆಗೆ ಕರೆದೊಯ್ದೆವು, ಇಲ್ಲಿ ಆಗುವುದಿಲ್ಲ,

ಕೊಪ್ಪಕ್ಕೆ ಕರೆದುಕೊಂಡು ಹೋಗಿ ಎಂದರು, ಅಲ್ಲಿಂದ ಕೊಪ್ಪ ಸರ್ಕಾರಿ ಆಸ್ಪತ್ರೆಗೆ ಕರೆದೊಯ್ದೆವು, ಸ್ಕ್ಯಾನಿಂಗ್ ಮಾಡಬೇಕೆಂದು ಹೇಳಿದರು ಕೊಪ್ಪ ಪ್ರಶಮನಿ ಆಸ್ಪತ್ರೆಯಲ್ಲಿ ಸ್ಕ್ಯಾನಿಂಗ್ ಮಾಡಿಸಿದೆವು, ಆಗ ನಮಗೆ ಗೊತ್ತಾಗಿದ್ದು ನಾಗರತ್ನ 3 ತಿಂಗಳ ಗರ್ಭಿಣಿ ಆಗಿದ್ದು ಗರ್ಭಪಾತ ಆಗಿದೆ ಎಂದು, ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ- ಸುಳ್ಳು

ಪ್ರಶ್ನೆಃ4- ಪ್ರಾಸಾ.1 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು, ಒಂದು ದಿನ ಕೊಪ್ಪ ಆಸ್ಪತ್ರೆಯಲ್ಲೇ ಇದ್ದೆವು, ಬ್ಲೀಡಿಗ್ ಬಹಳ ಆಗುತ್ತಿತ್ತು, ಬಹಳ ಹೊಟ್ಟೆ ನೋವು ಇತ್ತು ಎಂದು ,ಇಲ್ಲಿ ಆಗುವುದಿಲ್ಲ ಎಂದು ಹೇಳಿದರು ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ದಿನಾಂಕಃ 16-02-2019 ರಂದು ಕರೆದೊಯ್ದೆವು. ಮಗುವನ್ನು ತೆಗೆಯುವುದಕ್ಕೋಸ್ಕರ ಟ್ಯಾಬ್ಲೆಟ್ ಕೊಟ್ಟಿದ್ದಾರೆ, ಗರ್ಭಪಾತ ಆಗಿದೆ, ಇಲ್ಲಿ ಮೆಡಿಸಿನ್ ಕೊಡುತ್ತೇವೆ, ನೋಡೋಣ ಎಂದು ಹೇಳಿದರು, ಆದರೆ ದಿನಾಂಕಃ 18-02-2019 ರ ಬೆಳಿಗ್ಗೆ ಅಲ್ಲೇ ನಾಗರತ್ನ ಮೃತಪಟ್ಟಳು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ- ಸುಳ್ಳು

ಪ್ರಶ್ನೆಃ5- ಪ್ರಾಸಾ.1 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು, 3 /4 ವರ್ಷ ಗಳಿಂದ ನಾಗರತ್ನ ಮತ್ತು ಆರೋಪಿ ಯಾದ ನೀನು ಪ್ರೀತಿ ಮಾಡುತ್ತಿದ್ದರೆಂದು, ಈ ಕಾರಣದಿಂದ ಆರೋಪಿಯಿಂದಲೇ ನಾಗರತ್ನ ಗರ್ಭಿಣಿ ಆಗಿದ್ದಳೆಂದು, ಎಲ್ಲರಿಗೂ ಗೊತ್ತಾಗುತ್ತದೆ ಎಂದು ಮಗು ಬೇಡ ಎಂದು ನಾಗರತ್ನಳಿಗೆ ಆರೋಪಿಯಾದ ನೀನು ಗರ್ಭಪಾತ ಆಗಲೆಂದು ಟ್ಯಾಬ್ಲೆಟ್ ಕೊಟ್ಟಿದ್ದನೆಂದು ತಿಳಿದು ಬಂದಿತು, ಅದರಿಂದ ಹೊಟ್ಟೆ ನೋವು ಮತ್ತು ರಕ್ತ ಸ್ರಾವ ಉಂಟಾಗಿ ದಿನಾಂಕಃ 18-02-2019 ರಂದು ಬೆಳಿಗ್ಗೆ 5.30 ಗಂಟೆಗೆ ಮೃತಪಟ್ಟಳು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ- ಸುಳ್ಳು

ಪ್ರಶ್ನೆ:6- ಪ್ರಾಸಾ.1 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು, ಆರೋಪಿಯಾದ ನೀನು ಗರ್ಭಪಾತ ಆಗಲೆಂದು ಟ್ಯಾಬ್ಲೆಟ್ ಕೊಟ್ಟಿದ್ದರಿಂದ ನಾಗರತ್ನಳಿಗೆ ಗರ್ಭಪಾತ ಆಗಿ ನಾಗರತ್ನ ಮತ್ತು ಹೊಟ್ಟೆಯಲ್ಲಿದ್ದ ಮಗು ಮೃತಪಟ್ಟಿದ್ದು. ಆರೋಪಿಯೇ ಇದಕ್ಕೆಲ್ಲಾ ಕಾರಣ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ:- ಸುಳ್ಳು

ಪ್ರಶ್ನೆ:7- ಪ್ರಾಸಾ.1 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು, ದಿನಾಂಕ: 18-02-2019 ರಂದೇ ತಾನು ಜಯಪುರ ಪೊಲೀಸ್ ಠಾಣೆಗೆ ಹೋಗಿ ಈಗ ನೋಡುತ್ತಿರುವ ನಿ.ಪಿ. 1 ದೂರನ್ನು ಆರೋಪಿಯ ವಿರುದ್ಧ ಕೊಟ್ಟೆನು, ನಂತರ ಪುನಃ ನಾನು ಶಿವಮೊಗ್ಗಕ್ಕೆ ಮೆಗ್ಗಾನ್ ಆಸ್ಪತ್ರೆಗೆ ಹೋದೆನು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ:- ಸುಳ್ಳು

ಪ್ರಶ್ನೆ:8- ಪ್ರಾಸಾ.1 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು, ನಿ.ಪಿ.2 ಫೋಟೋವನ್ನು ದಿನಾಂಕ:19-02-2019 ರಂದು ಶವ ಪಂಚನಾಮೆ ಕಾಲಕ್ಕೆ ತೆಗೆದದ್ದು ಎಂದು, ಆ ಫೋಟೋದಲ್ಲಿ ಇರುವ ಶವ ನಾಗರತ್ನ ಅವರದ್ದು ಎಂದು, ಆ ಫೋಟೋದಲ್ಲಿ ತಾನು ಸಹಾ ಇದ್ದೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ:- ಗೊತ್ತಿಲ್ಲ

ಪ್ರಶ್ನೆ:9- ಪ್ರಾಸಾ.2 ನಾಗರಾಜ ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ , ದಿನಾಂಕ: 19-02-2019 ರಂದು ನಾಗರತ್ನ ಮೃತಪಟ್ಟಳು ಎಂದು , ನಾಗರತ್ನಳಿಗೆ ಹುಷಾರಿಲ್ಲ ಎಂದು ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ಅಡ್ಮಿಟ್ ಮಾಡಿದ್ದೇವೆಂದು ಹೇಳಿದ್ದರು, ಶಿವಮೊಗ್ಗದ ಆಸ್ಪತ್ರೆಯ ಶವಾಗಾರದಲ್ಲಿ ನಾಗರತ್ನಳ ಶವ ನೋಡಿದೆನು ಎಂದು , ಅಲ್ಲಿ ತನಗೆ ನೋಟೀಸ್ ಕೊಟ್ಟು , ನಿ.ಪಿ. 3 ಶವ ಪಂಚನಾಮೆಯನ್ನು ತನ್ನ ಸಮಕ್ಷಮ ಮಾಡಿದರು, ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ:- ಗೊತ್ತಿಲ್ಲ

ಪ್ರಶ್ನೆ:10- ಪ್ರಾಸಾ.2 ನಾಗರಾಜ ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು, ಮೂರುವರೆ ವರ್ಷಗಳ ಹಿಂದೆ ಮಧ್ಯಾಹ್ನ 3.00 ಗಂಟೆಗೆ ಶವ ಮಹಜರ್ ಮಾಡಿದ್ದು ಎಂದು, ಶವ ಪಂಚನಾಮೆ ಮಾಡುವ ಕಾಲದಲ್ಲಿ, ತಾನು, ಪ್ರಾಸಾ-1-ಸುರೇಶ, ನಾಗರತ್ನಳ ತಾಯಿ, ಚಾಸಾ-3 ಅನಿಲ್ ಇದ್ದೆವು, ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ:- ಗೊತ್ತಿಲ್ಲ

ಪ್ರಶ್ನೆ:11- ಪ್ರಾಸಾ.2 ನಾಗರಾಜ ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಆರೋಪಿಯಾದ ನೀನು ನಾಗರತ್ನಳ ಹೊಟ್ಟೆಯಲ್ಲಿ ಮಗು ಇದ್ದದ್ದು ಕರಗಲೆಂದು ಟ್ಯಾಬ್ಲೆಟ್ ಕೊಟ್ಟಿದ್ದನೆಂದು, ಅದರಿಂದ ರಕ್ತ ಬೇದಿ ಆಗಿ ಮೃತಪಟ್ಟಳು ಎಂದು ತಿಳಿದು ಬಂದಿತು ಎಂದು, ನನ್ನ ಸಮಕ್ಷಮ ಮಾಡಿದ ಶವ ಪಂಚನಾಮೆ ನಿ.ಪಿ. 4 ಎಂದು , ನಾಗರತ್ನಳ ಸಾವಿಗೆ ಆರೋಪಿಯೇ ಕಾರಣ ಎಂದು ಅದರಲ್ಲಿ ಬರೆಯಲಾಗಿತ್ತು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ:- ಸುಳ್ಳು

ಪ್ರಶ್ನೆ:12- ಪ್ರಾಸಾ.2 ನಾಗರಾಜ ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು, ಆ ಮಹಜರ್ ಸಮಯದಲ್ಲಿನಿ.ಪಿ.2 ಫೋಟೋ ತೆಗೆದರು ಎಂದು ಅದರಲ್ಲಿ ಇರುವ ಶವ ನಾಗರತ್ನಳದ್ದೇ ಎಂದು , ಅದರಲ್ಲಿ ತಾನು, ಪ್ರಾಸಾ-1-ಸುರೇಶ, ಚಾಸಾ-3-ಅನಿಲ್ ಇದ್ದೇವೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ:- ಸುಳ್ಳು

ಪ್ರಶ್ನೆ:13- ಪ್ರಾಸಾ.7 ಡಾ: ಉದಯಶಂಕರ .ಹೆಚ್.ಜಿ. ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು, ಕೊಪ್ಪದ ಸರ್ಕಾರಿ ಆಸ್ಪತ್ರೆಯಿಂದ ದಿನಾಂಕ: 14-02-2019 ರಂದು ಡಾ: ಶಿವಕುಮಾರ್ ಎನ್ನುವ ವೈದ್ಯರು ನಾಗರತ್ನ ಎನ್ನುವ ಗರ್ಭಿಣಿಯನ್ನು ಸ್ಕ್ಯಾನಿಂಗ್ ಗಾಗಿ ರೆಫರ್ ಮಾಡಿದ್ದರು ಎಂದು, ದಿನಾಂಕ: 15-02-2019 ರಂದು ನಾಗರತ್ನ ಎನ್ನುವ ಗರ್ಭಿಣಿ ಸ್ತ್ರೀಯನ್ನು ಸ್ಕ್ಯಾನಿಂಗ್ ಗೆ ಒಳಪಡಿಸಿದೆನು ಎಂದು, 15 ವಾರ 2 ದಿನಗಳ ಗರ್ಭಿಣಿ ಎಂದು ಸ್ಕ್ಯಾನಿಂಗ್ ನಲ್ಲಿ ಕಂಡು ಬಂದಿತು ಎಂದು ನಿ.ಪಿ.12 ಸ್ಕ್ಯಾನಿಂಗ್ ರಿಪೋರ್ಟ

ಎಂದು, ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ- ಸುಳ್ಳು

ಪ್ರಶ್ನೆಃ14- ಪ್ರಾಸಾ.8 ಡಾಃ ಶಿವಕುಮಾರ್ ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ದಿನಾಂಕಃ 14-02-2019 ರಂದು ತಾನು ರಾತ್ರಿ 11.30 ಗಂಟೆಗೆ ಕರ್ತವ್ಯದ ಮೇಲೆ ಇದ್ದಾಗ ಕುಃ ನಾಗರತ್ನ, 19 ವರ್ಷ ಇವರು ಹೊಟ್ಟೆ ನೋವು ಮತ್ತು ವಾಂತಿ ಎಂದು ತಮ್ಮ ಆಸ್ಪತ್ರೆಗೆ ಬಂದರು ಎಂದು, ಅದೇ ದಿನ ಬೆಳಿಗ್ಗೆ ತಮ್ಮ ಆಸ್ಪತ್ರೆಗೆ ಬೇರೆ ವೈದ್ಯರ ಬಳಿಗೆ ಬಂದು ಪರೀಕ್ಷಿಸಿಕೊಂಡು drips ಹಾಕಿಸಿಕೊಂಡು ಮನೆಗೆ ಹೋಗಿದ್ದೆವೆಂದು ಹೇಳಿದರು, ಎಂದು ನೋವು ಕಡಿಮೆ ಆಗಿಲ್ಲವೆಂದು ಪುನಃ ಅದೇ ದಿನ ರಾತ್ರಿ ಮೇಲೆ ಹೇಳಿದಂತೆ ಆಸ್ಪತ್ರೆಗೆ ಬಂದರು ಎಂದು, ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ- ಸುಳ್ಳು

ಪ್ರಶ್ನೆಃ15- ಪ್ರಾಸಾ.8 ಡಾಃ ಶಿವಕುಮಾರ್ ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು ಆಕೆಯನ್ನು ಪರೀಕ್ಷಿಸಲಾಗಿ ಬಿಪಿ 80/60 ಇದ್ದು, ಆ ಹುಡುಗಿ ಶಾಕ್ ನಲ್ಲಿ ಇದ್ದಳು ಎಂದು , ತಾನು ಪರೀಕ್ಷೆ ಮಾಡಿದಾಗ ಆ ಹುಡುಗಿ ಗರ್ಭಿಣಿ ಆಗಿರಬಹುದು ಎಂದು ಅನುಮಾನ ಬಂದು ಮೂತ್ರ ಪರೀಕ್ಷೆಯನ್ನು ಮಾಡಿಸಲಾಯಿತು, ಅದರ ಪ್ರಕಾರ ಆ ಹುಡುಗಿ ಗರ್ಭಿಣಿ ಎಂದು ಕಂಡು ಬಂದಿತು ಎಂದು, ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ- ಗೊತ್ತಿಲ್ಲ

ಪ್ರಶ್ನೆಃ16- ಪ್ರಾಸಾ.8 ಡಾಃ ಶಿವಕುಮಾರ್ ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು , ಗರ್ಭಿಣಿಯರಲ್ಲಿ ಟ್ಯೂಬಲ್ ಪ್ರೆಗ್ನೆನ್ಸಿ ಎಂದು ಇರುತ್ತದೆ, ಆ ರೀತಿ ಏನಾದರೂ ಇದ್ದಲ್ಲಿ ಗರ್ಭಿಣಿಯರು ಶಾಕ್ ನಲ್ಲಿ ಇರುತ್ತಾರೆ, ಕಾರಣ ಅದರ ಬಗ್ಗೆ ಹೌದೋ ಅಲ್ಲವೋ ಎಂದು ಕಂಡು ಹಿಡಿಯಲು ದೂರವಾಣಿ ಮೂಲಕ ಪ್ರಾಸಾ-7 -ಡಾಃ ಉದಯಶಂಕರ್ ಇವರಿಗೆ ಸ್ಕ್ಯಾನಿಂಗ್ ಮಾಡಬೇಕೆಂದು ಕೇಳಿಕೊಂಡು, ಈ ಬಗ್ಗೆ ನಿ.ಪಿ. 10 reference letter ನ್ನು ಅದೇ ದಿನ ರಾತ್ರಿ ಕಳುಹಿಸಿಕೊಟ್ಟೆನು, ಎಂದು,

ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ- ಸುಳ್ಳು

ಪ್ರಶ್ನೆಃ17- ಪ್ರಾಸಾ.8 ಡಾಃ ಶಿವಕುಮಾರ್ ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು , 15-02-2019 ರ ರಾತ್ರಿ, 12.30 ಗಂಟೆಗೆ ಸ್ಕ್ಯಾನಿಂಗ್ ರಿಪೋರ್ಟಿನೊಂದಿಗೆ ಪ್ರಾಸಾ-7 ವಾಪಾಸು ಬಂದರು, ಆ ಸ್ಕ್ಯಾನಿಂಗ್ ರಿಪೋರ್ಟ್ ಪ್ರಕಾರ 15 ವಾರಗಳ ಗರ್ಭಿಣಿ ಎಂದು ಇತ್ತು. ಅದರ ಪ್ರಕಾರ ನಾನು observation ನಲ್ಲಿ ಆ ಹುಡುಗಿಯನ್ನು ಇಟ್ಟು ಸ್ತ್ರೀರೋಗ ತಜ್ಞರಿಗೆ refer ಮಾಡಿದೆನು ಎಂದು, ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ- ಗೊತ್ತಿಲ್ಲ

ಪ್ರಶ್ನೆಃ18- ಪ್ರಾಸಾ.9 ಡಾ.ಬಾಲಕೃಷ್ಣ ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ, ದಿಃ 16.02.2019 ರಂದು ಬೆಳಿಗ್ಗೆ 9.00 ಗಂಟೆಗೆ ತಾನು ತನ್ನ ಕರ್ತವ್ಯಕ್ಕೆ ಹಾಜರಾದಾಗ ನಾಗರತ್ನ ಎನ್ನುವವರು ಆಸ್ಪತ್ರೆಗೆ ದಾಖಲಾಗಿದ್ದರು ಎಂದು, ನಾಗರತ್ನ ಅವರ ತಂದೆ ಮತ್ತು ಮತ್ತೊಬ್ಬ ಮಹಿಳೆ ತನ್ನ ಬಳಿಗೆ ಒಂದು ಸ್ಕ್ಯಾನಿಂಗ್ ರಿಪೋರ್ಟನ್ನು ತಂದರು ಎಂದು, ಹೊಟ್ಟೆ ನೋವು ಮತ್ತು ರಕ್ತ ಸ್ರಾವವಾಗುತ್ತಿದೆ ಎಂದು ನಾಗರತ್ನ ಇವರನ್ನು ದಾಖಲು ಮಾಡಲಾಗಿದೆ ಎಂದು ಹೇಳಿದರು ಎಂದು, ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ- ಗೊತ್ತಿಲ್ಲ

ಪ್ರಶ್ನೆಃ19- ಪ್ರಾಸಾ.9 ಡಾ.ಬಾಲಕೃಷ್ಣ ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು ಅವರು ತಂದ ಸ್ಕ್ಯಾನಿಂಗ್ ರಿಪೋರ್ಟ ಪ್ರಕಾರ ನಾಗರತ್ನ ಇವರು, ಮೂರು ತಿಂಗಳ ಗರ್ಭಿಣಿ ಎಂದು ಗರ್ಭಪಾತ ಆಗುತ್ತಿದೆ ಎಂದು ಕಂಡುಬಂತು ಎಂದು , ತಾನು ಇತಿಹಾಸದ ಬಗ್ಗೆ ನಾಗರತ್ನ ಅವರ ತಂದೆಯನ್ನು ವಿಚಾರಿಸಿದಾಗ ನಾಗರತ್ನ ಪ್ರೀತಿ ಮಾಡುತ್ತಿದ್ದರು, ಆತನೊಂದಿಗೆ ಲೈಂಗಿಕ ಸಂಪರ್ಕ ಇಟ್ಟುಕೊಂಡಿದ್ದಳು ಎಂದು, ಇದರಿಂದ ಗರ್ಭಿಣಿ ಆಗಿದ್ದಳೆಂದು ಹೇಳಿದರು. ಎಂದು, ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ- ಸುಳ್ಳು

ಪ್ರಶ್ನೆ:20- ಪ್ರಾಸಾ.9 ಡಾ.ಬಾಲಕೃಷ್ಣ ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು ಮೂರು ದಿನಗಳ ಹಿಂದೆ ಆ ಹುಡುಗ ಯಾವುದೋ ಮಾತ್ರೆಗಳನ್ನು ನಾಗರತ್ನ ಇವರಿಗೆ ತಂದುಕೊಟ್ಟಿದನು ಎಂದು, ಅದನ್ನು ಆಕೆ ನುಂಗಿದ್ದಳು ಎಂದು, ತದನಂತರ ಹೊಟ್ಟೆನೋವು ಮತ್ತು ರಕ್ತಸ್ರಾವ ಪ್ರಾರಂಭವಾಯಿತು ಎಂದು, ಜಯಪುರದ ಸಾರ್ವಜನಿಕ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೆವು ಎಂದು, ಆ ಆಸ್ಪತ್ರೆಯಲ್ಲಿ ಸರಿಯಾದ ವ್ಯವಸ್ಥೆ ಇಲ್ಲದ್ದರಿಂದ ಕೊಪ್ಪದ ಆಸ್ಪತ್ರೆಗೆ ಹೋಗಿ ಎಂದು ಸೂಚಿಸಿದರು ಕಾರಣ ಇಲ್ಲಿಗೆ ಬಂದೆವೆಂದು ಹೇಳಿದರು ಎಂದು, ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ:- ಗೊತ್ತಿಲ್ಲ

ಪ್ರಶ್ನೆ:21- ಪ್ರಾಸಾ.9 ಡಾ.ಬಾಲಕೃಷ್ಣ ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು ನಾಗರತ್ನ ಇವರನ್ನು ಹೆರಿಗೆ ಕೋಣೆಗೆ ನರ್ಸುಗಳ ಸಹಾಯದಿಂದ ಕರೆದೊಯ್ದು, ಪರಿಕ್ಷೀಸಿದಾಗ ಭ್ರೂಣ ಹೊರಗಡೆ ಬರುತ್ತಿತ್ತು, ರಕ್ತಸ್ರಾವವಾಗುತ್ತಿತ್ತು, ಭ್ರೂಣ ಹೊರಗಡೆ ಬಂದಿತು, ತಾನು ಸೂಕ್ತ ಚಿಕಿತ್ಸೆಯನ್ನು ಅಂದರೆ ರಕ್ತಸ್ರಾವ ನಿಲ್ಲಲು ಮತ್ತು ನೋವು ಕಡಿಮೆಯಾಗಲು ಚಿಕಿತ್ಸೆ ಕೊಟ್ಟೆನು ಎಂದದು , ರಕ್ತ ಪರೀಕ್ಷೆ ಮಾಡಿದಾಗ ನಾಗರತ್ನ ಇವರಿಗೆ ರಕ್ತ ಕಡಿಮೆ ಇತ್ತು, ತಮ್ಮ ಆಸ್ಪತ್ರೆಯಲ್ಲಿ, ಅವರಿಗೆ ಬೇಕಾದ ಒಂದು ಬಾಟಲ್ ರಕ್ತ ಕೊಡಲಾಯಿತು, ನಾಗರತ್ನ ಇವರು ಚೇತರಿಸಿಕೊಂಡರು. ಬಿಪಿ ಮತ್ತು ನಾಡಿ ಸಹಜವಾಗಿ ಇತ್ತು ಎಂದು, ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ:- ಗೊತ್ತಿಲ್ಲ

ಪ್ರಶ್ನೆ:22- ಪ್ರಾಸಾ.9 ಡಾ.ಬಾಲಕೃಷ್ಣ ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು ಮಾರನೇ ದಿನದವರೆಗೂ ನಾಗರತ್ನ ಇವರು ಚೆನ್ನಾಗಿಯೇ ಇದ್ದರು ಎಂದು , ನಂತರ ರಕ್ತಸ್ರಾವ ಪ್ರಾರಂಭವಾಯಿತು, ಬಿಪಿ ಕಡಿಮೆಯಾಯಿತು, ಈ ಕಾರಣದಿಂದ ನಮ್ಮಲ್ಲಿ ಸರಿಯಾದ ವ್ಯವಸ್ಥೆ ಇಲ್ಲ ಎಂದು ಶಿವಮೊಗ್ಗದ ಆಸ್ಪತ್ರೆಗೆ ರೆಫರ್ ಮಾಡಲಾಯಿತು ಎಂದು, ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ:- ಗೊತ್ತಿಲ್ಲ

ಪ್ರಶ್ನೆ:23- ಪ್ರಾಸಾ.9 ಡಾ.ಬಾಲಕೃಷ್ಣ ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು ನಾಗರತ್ನ ಇವರು ತಮ್ಮ ಆಸ್ಪತ್ರೆಗೆ ದಾಖಲಾದ ಬಗ್ಗೆ ನಿಶಾನೆ ಪಿ.18 ಕೇಸು ಶೀಟಿನ ಎಕ್ಸ್‌ಟ್ರಾಕ್ಟ್ ಇರುತ್ತದೆ ಎಂದು , ನಾಗರತ್ನ ಅವರು ನಮ್ಮ ಆಸ್ಪತ್ರೆಯಲ್ಲಿ ದಾಖಲಾದಾಗಿನಿಂದ ಶಿವಮೊಗ್ಗ ಆಸ್ಪತ್ರೆಗೆ ದಾಖಲಾಗುವವರೆಗೂ ಏನೇನಾಯಿತು ಎಂದು ಬರೆದುಕೊಡಿ ಎಂದು ಪೋಲೀಸರು ಕೇಳಿದ್ದರು ಎಂದು , ಆ ಬಗ್ಗೆ ನಿಶಾನೆ ಪಿ.19 ದಾಖಲೆ ಬರೆದುಕೊಟ್ಟೆ ಎಂದು, ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ:- ಗೊತ್ತಿಲ್ಲ

ಪ್ರಶ್ನೆ:24- ಪ್ರಾಸಾ.9 ಡಾ.ಬಾಲಕೃಷ್ಣ ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು ಮೃತೆಯು ತಮ್ಮ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ಚಿಕಿತ್ಸೆ ಪಡೆದಿರುವುದಿಲ್ಲ, ಎಂದು ನಿ.ಪಿ.18 ರ ದಾಖಲೆಯ ಮೇಲೆ "case sheet duplicate" ಎಂದು ನಮೂದಿಸಿರುವುದು OPD ಗೆ ಸಂಬಂಧಪಟ್ಟ ದಾಖಲೆ ಎಂದು, ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ:- ಗೊತ್ತಿಲ್ಲ

ಪ್ರಶ್ನೆ:25- ಪ್ರಾಸಾ.10 ಡಾ.ಚಿದಾನಂದ ಪಿ.ಎಸ್. ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆ - ಸಿಮ್ಸ್ ನಲ್ಲಿ ಅಸೋಸಿಯೇಟ್ ಪ್ರೊಫೆಸರ್- ಫೋರೆನ್ಸಿಕ್ ಮೆಡಿಸನ್ ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ದಿನಾಂಕ: 19-02-2019 ರಂದು ತಾನು ಜಯಪುರ ಪೊಲೀಸ್ ಠಾಣೆಯಿಂದ ನಾಗರತ್ನ ಎನ್ನುವವರ ಶವದ ಶವ ಪರೀಕ್ಷೆಯನ್ನು ಮಾಡಿಕೊಡುವಂತೆ ಬಂದ ಕೋರಿಕೆ ಪತ್ರದ ಮೇರೆಗೆ ತಾನು , ಅದೇ ದಿನ ಬೆಳಿಗ್ಗೆ 11.00 ಗಂಟೆಯಿಂದ 12.30 ರವರೆಗೆ ಮೆಗ್ಗಾನ್ ಆಸ್ಪತ್ರೆಯ ಶವಾಗಾರದಲ್ಲಿ ಮರಣೋತ್ತರ ಪರೀಕ್ಷೆಯನ್ನು ನಡೆಸಿರುತ್ತೇನೆ ಎಂದು, ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ:- ಗೊತ್ತಿಲ್ಲ

ಪ್ರಶ್ನೆ:26- ಪ್ರಾಸಾ.10 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು ಮೃತ ದೇಹದ ಮೇಲೆ ಒಂದು ನೈಟಿ, ಕತ್ತಿನಲ್ಲಿ ಒಂದು ದಾರ,

ಎಡಗಾಲಿನಲ್ಲಿ ಒಂದು ಕಪ್ಪು ದಾರ ಇತ್ತು. ಅವುಗಳನ್ನು ಪ್ರತ್ಯೇಕವಾಗಿ ಪ್ಯಾಕ್ ಮಾಡಿ, ಸೀಲ್ ಮಾಡಿ, ಮೊಹರಿನೊಂದಿಗೆ ಪೊಲೀಸರಿಗೆ ಕೊಟ್ಟಿರುತ್ತೇನೆ ಎಂದು, ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ- ಗೊತ್ತಿಲ್ಲ

ಪ್ರಶ್ನೆಃ27- ಪ್ರಾಸಾ.10 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು ಮೃತ ದೇಹದ ಸ್ಥಿತಿಗತಿಗಳನ್ನು ತನ್ನ ವರದಿಯಲ್ಲಿ ವಿವರವಾಗಿ ಸಾವಿನ ಕಾರಣವನ್ನು ಕಾಯ್ದಿರಿಸಿ, ನಿ.ಪಿ.24 ಮರಣೋತ್ತರ ಪರೀಕ್ಷಾ ವರದಿಯನ್ನು ನೀಡಿರುತ್ತೇನೆ ಎಂದು ಹೇಳಿರುತ್ತಾರೆ ಎಂದು, ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ- ಗೊತ್ತಿಲ್ಲ

ಪ್ರಶ್ನೆಃ28- ಪ್ರಾಸಾ.10 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು ದಿನಾಂಕಃ 20-03-2020 ರಂದು ಪೊಲೀಸರಿಂದ ಎಫ್ ಎಸ್ ಎಲ್ ವರದಿ, ಎಂ ಎಸ್ ಡಿ ಎಂ ಜನರಲ್ ಆಸ್ಪತ್ರೆ, ಕೊಪ್ಪರವರಿಂದ ಪತ್ರ, ಹಿಸ್ಟೋ ಪೆಥಾಲಜಿ ವರದಿ ಹಾಗೂ ಮೈಕ್ರೋ ಬಯಾಲಜಿ ವರದಿಯನ್ನು ಪಡೆದುಕೊಂಡು,ನಿ.ಪಿ.16 ರಿಂದ 19 ರಂತೆ ಅವುಗಳನ್ನು ಪರಿಶೀಲಿಸಿ, ಮೃತೆಯ ಸಾವು septicemia ದಿಂದ ಆಗಿದೆ ಎಂದು ನಿ.ಪಿ. 25 ರಂತೆ ಅಂತಿಮ ಅಭಿಪ್ರಾಯ ವರದಿಯನ್ನು ನೀಡಿರುತ್ತೇನೆ ಎಂದು, ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ- ಗೊತ್ತಿಲ್ಲ

ಪ್ರಶ್ನೆಃ29- ಪ್ರಾಸಾ.11 ಧರ್ಮರಾಜ್ ಪೋಲಿಸ್ ಪೇದೆ ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ದಿನಾಂಕಃ 20-02-2019 ರಂದು ಈ ಪ್ರಕರಣದಲ್ಲಿ ಚಾಸಾ-22- ತನಿಖಾಧಿಕಾರಿಯು ತನ್ನನ್ನು ಮಹಜರಿಗೆಂದು ಮತದ ಗದ್ದೆ ಹೆದ್ದೆ ಗ್ರಾಮದ ಈ ಪ್ರಕರಣದ ಮೃತೆ ನಾಗರತ್ನರವರ ಮನೆಗೆ ಕರೆದುಕೊಂಡು ಹೋಗಿ ಸದರಿ ಸ್ಥಳದಲ್ಲಿ ಸ್ಥಳ ಮಹಜರ್ ಮಾಡಿದ್ದು, ಸ್ಥಳ ಮಹಜರ್ ಮಾಡುವ ಸಂದರ್ಭದಲ್ಲಿ ಫೋಟೋ ತೆಗೆಯುವಂತೆ ತನಗೆ ನಿರ್ದೇಶಿಸಿದ್ದು, ಅದರಂತೆ ನಾನು ನಿ.ಪಿ.9 ರಂತೆ ಫೋಟೋ ತೆಗೆದು ಠಾಣೆಗೆ ವಾಪಾಸು ಬಂದ ನಂತರ ಮಹಜರ್

ಸಮಯದಲ್ಲಿ ತೆಗೆದ ಫೋಟೋವನ್ನು ಕಂಪ್ಯೂಟರ್ ಗೆ ಡಾಟಾ ಕೇಬಲ್ ಮೂಲಕ ವರ್ಗಾವಣೆ ಮಾಡಿ ಸಿಡಿಗೆ ಟ್ರಾನ್ಸ್ ಫರ್ ಮಾಡಿ, ಆ ಬಗ್ಗೆ ತಾನು ನಿ.ಪಿ. 27 ರಂತೆ ಸಾಕ್ಷ್ಯ ಅಧಿನಿಯಮ ಕಲಂ.65(ಬಿ) ಅಡಿಯಲ್ಲಿ ಸರ್ಟಿಫಿಕೇಟನ್ನು ಕೊಟ್ಟಿದ್ದು, ಸದರಿ ಸರ್ಟಿಫಿಕೇಟನ್ನು ಈಗ ನೋಡುತ್ತಿದ್ದು, ಅದನ್ನು ಎಂದು ಗುರುತಿಸಲಾಯಿತು. ಸದರಿ ದೃಢೀಕರಣ ಪತ್ರವನ್ನು ಚಾಸಾ-23 ರವರಿಗೆ ಕೊಟ್ಟಿರುತ್ತೇನೆ ಎಂದು, ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ- ಸುಳ್ಳು

ಪ್ರಶ್ನೆಃ30- ಪ್ರಾಸಾ.12 ಸೂರಪ್ಪ ಎಸ್ ಎನ್ , ಎ ಎಸ್ಐ ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ದಿನಾಂಕಃ 18-02-2019 ರಂದು ಸಾಯಂಕಾಲ 7.30 ಗಂಟೆಗೆ ಠಾಣಾ ಎಸ್ ಎಚ್ ಒ ಕರ್ತವ್ಯದಲ್ಲಿದ್ದಾಗ ಈ ಪ್ರಕರಣದ ಫಿರ್ಯಾದುದಾರರು ಠಾಣೆಗೆ ಹಾಜರಾಗಿ ಕೊಟ್ಟ ನಿ.ಪಿ.1-ಲಿಖಿತ ಫಿರ್ಯಾದನ್ನು ಸ್ವೀಕರಿಸಿಕೊಂಡು ಪ್ರಕರಣ ದಾಖಲು ಮಾಡಿ ನಿ.ಪಿ. 29 ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಹಾಗೂ ನನ್ನ ಮೇಲಾಧಿಕಾರಿಗಳಿಗೆ ಕಳುಹಿಸಿಕೊಟ್ಟಿರುತ್ತೇನೆ ಎಂದು, ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ- ಗೊತ್ತಿಲ್ಲ

ಪ್ರಶ್ನೆಃ31- ಪ್ರಾಸಾ.12 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು ದಿನಾಂಕಃ 19-02-2019 ರಂದು ಚಾಸಾ-21 ರವರು ಶಿವಮೊಗ್ಗ ಆಸ್ಪತ್ರೆಯಿಂದ ಮೃತ ನಾಗರತ್ನ ಇವರ ಶವ ತನಿಖೆಯನ್ನು ನಡೆಸಿ, ನಿ.ಪಿ.4-ರ ಶವ ತನಿಖಾ ವರದಿಯನ್ನು ತಂದು ಠಾಣೆಗೆ ಹಾಜರುಪಡಿಸಿದ್ದು, ಅದನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿರುತ್ತೇನೆ ಎಂದು, ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ- ಗೊತ್ತಿಲ್ಲ

ಪ್ರಶ್ನೆಃ32- ಪ್ರಾಸಾ.12 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು ದಿನಾಂಕಃ 20-02-2019 ರಂದು ತಾನು ಮೃತೆ ವಾಸವಿದ್ದ ಮನೆ ಅಂದರೆ ಕೃತ್ಯ ನಡೆದ ಸ್ಥಳವಾದ ಮಠದಗದ್ದೆ, ಹೆದ್ಸೆ ಗ್ರಾಮಕ್ಕೆ ಹೋಗಿ, ಮೃತಳ

ತಾಯಿ ಶಾಂತಮ್ಮ ತೋರಿಸಿದ ಜಾಗದಲ್ಲಿ ಪಂಚರ ಸಮಕ್ಷಮ ಸಂಜೆ 5.00 ರಿಂದ 5.30 ರವರೆಗೆ ನಿ.ಪಿ.8 ರಂತೆ ಮಹಜರ್ ಕ್ರಮ ಜರುಗಿಸಿ ನಿ.ಪಿ.9 ರ ಫೋಟೋ ಸಹಾ ತೆಗೆಸಿರುತ್ತೇನೆ ಎಂದು, ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ- ಸುಳ್ಳು

ಪ್ರಶ್ನೆಃ33- ಪ್ರಾಸಾ.12 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು ದಿನಾಂಕಃ 02-03-2019 ರಂದು ಮೃತೆಯ ವಿಸೆರಾವನ್ನು ಕೊಡುವಂತೆ ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಯ ವೈದ್ಯಾಧಿಕಾರಿಯವರಿಗೆ ಕೋರಿಕೆ ಪತ್ರವನ್ನು ಸಲ್ಲಿಸಿ , ದಿನಾಂಕಃ 03-04-2019 ರಂದು ಕೃತ್ಯ ನಡೆದ ಸ್ಥಳದ ದಾಖಲೆಯನ್ನು ಕೊಡುವಂತೆ ಗ್ರಾಮ ಪಂಚಾಯ್ತಿ ಪಿಡಿಒರವರಿಗೆ ಕೋರಿಕೆ ಪತ್ರವನ್ನು ಸಲ್ಲಿಸಿ, ನಂತರ ಈ ಪ್ರಕರಣದ ಮೃತೆಗೆ ಚಿಕಿತ್ಸೆ ನೀಡಿದ ಬಗ್ಗೆ ಕೇಸ್ ಶೀಟನ್ನು ನೀಡುವಂತೆ ಡಾಃ ಬಾಲಕೃಷ್ಣ ವೈದ್ಯಾಧಿಕಾರಿಗಳು ಇವರಿಗೆ ಕೋರಿಕೆ ಪತ್ರವನ್ನು ಸಲ್ಲಿಸಿರುತ್ತೇನೆ ಎಂದು, ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ- ಗೊತ್ತಿಲ್ಲ

ಪ್ರಶ್ನೆಃ34- ಪ್ರಾಸಾ.12 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು ದಿನಾಂಕಃ 30-04-2019 ರಂದು ಪಿಡಿಒರವರಿಂದ ಬಂದ ಕೃತ್ಯ ನಡೆದ ಸ್ಥಳದ ದಾಖಲೆಯ ದೃಢೀಕರಣ ಪತ್ರವನ್ನು ಸ್ವೀಕರಿಸಿ ಕೊಂಡು ಕಡತಕ್ಕೆ ಅಳವಡಿಸಿಕೊಂಡಿದ್ದು, ಕೃತ್ಯ ನಡೆದ ಸ್ಥಳವು ಶ್ರೀಮತಿ ಶಾಂತ ಕೋಂ ರಂಗಯ್ಯರವರಿಗೆ ಅಂದರೆ ಮೃತೆಯ ತಾಯಿಗೆ ಸೇರಿದ್ದು ಎಂದು ದೃಢೀಕರಣ ಪತ್ರವನ್ನು ನೀಡಿರುತ್ತಾರೆ ಎಂದು, ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ- ಗೊತ್ತಿಲ್ಲ

ಪ್ರಶ್ನೆಃ35- ಪ್ರಾಸಾ.12 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು ದಿನಾಂಕಃ 08-05-2019 ರಂದು ಡಾಃ ಬಾಲಕೃಷ್ಣರವರು ಮೃತೆಗೆ ಚಿಕಿತ್ಸೆ ನೀಡಿದ ಬಗ್ಗೆ ವರದಿಯನ್ನು ನಿ.ಪಿ.18 ಮತ್ತು 19 ರಂತೆ ನೀಡಿದ್ದು, ನಂತರ ತಾನು ದಿನಾಂಕಃ 17-05-2019 ರಂದು ಕೊಪ್ಪದ ಪ್ರಶಮನಿ ಆಸ್ಪತ್ರೆಯ ವೈದ್ಯಾಧಿಕಾರಿಗಳಿಗೆ ಮೃತೆಯ ಸ್ಕ್ಯಾನಿಂಗ್ ವರದಿಯನ್ನು ನೀಡುವಂತೆ ಕೋರಿಕೆ ಪತ್ರವನ್ನು ಸಲ್ಲಿಸಿ ಅವರಿಂದ ದಿನಾಂಕಃ 20-05-2019 ರಂದು

ನಿ.ಪಿ.13 ರಂತೆ ಮೃತೆಯ ಸ್ಕ್ಯಾನಿಂಗ್ ವರದಿಯನ್ನು ಸ್ವೀಕರಿಸಿರುತ್ತೇನೆ ಎಂದು, ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ- ಗೊತ್ತಿಲ್ಲ

ಪ್ರಶ್ನೆಃ36- ಪ್ರಾಸಾ.12 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು ದಿನಾಂಕಃ 22-05-2019 ರಂದು ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಯಿಂದ ಮೃತೆಯ ವಿಸೆರಾ ಮತ್ತು ನಿ.ಪಿ.24 ರ ಪಿ.ಎಂ.ವರದಿ ಹಾಗೂ control swab, vaginal swab ಬಂದಿದ್ದು, ಅವುಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಆರ್.ಎಫ್.ಎಸ್.ಎಲ್. ಮಂಗಳೂರಿಗೆ ನಮ್ಮ ಸಿಬ್ಬಂದಿಯಾದ ಗುರುಮೂರ್ತಿ-ಹೆಚ್.ಸಿ.239 ಇವರ ಮೂಲಕ ಕಳುಹಿಸಿಕೊಟ್ಟಿರುತ್ತೇನೆ ಎಂದು, ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ- ಗೊತ್ತಿಲ್ಲ

ಪ್ರಶ್ನೆಃ37- ಪ್ರಾಸಾ.13 ಶಾಂತ ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಈಗ್ಗೆ 5-6 ವರ್ಷಗಳ ಹಿಂದೆ ಮೃತ ನಾಗರತ್ನ ತನ್ನ ಮಗಳು, ಮತ್ತು ಆರೋಪಿ ಒಬ್ಬರಿಗೊಬ್ಬರು ಪ್ರೀತಿಸುತ್ತಿದ್ದರು. ಅಲ್ಲಿ-ಇಲ್ಲಿ ಓಡಾಡಿಕೊಂಡಿದ್ದರು ಎಂದು , ಒಮ್ಮೆ ಆಕೆಯು ತನಗೆ ಹೊಟ್ಟೆ ನೋವು ಎಂದು ಹೇಳಿದದಾಗ ಆಕೆಗೆ ಏನೋ ತೊಂದರೆ ಇರಬಹುದು ಎಂದು ಹೇಳಿ ನಾವು ಆಕೆಯನ್ನು ಬಂಡಿಗಡಿ ದೇವಸ್ಥಾನಕ್ಕೆ ಕರೆದುಕೊಂಡು ಹೋಗಿ, ದೇವರ ಕಾರ್ಯ ಮುಗಿಸಿ ಮನೆಗೆ ಕರೆದುಕೊಂಡು ಬಂದೆವು, ಆದರೂ ಸಹಾ ಹೊಟ್ಟೆ ನೋವು ಕಡಿಮೆ ಆಗದೇ ಇದ್ದುದರಿಂದ ಜಯಪುರ ಆಸ್ಪತ್ರೆಗೆ ಕರೆದುಕೊಂಡು ಹೋದೆವು ಎಂದು, ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ- ಸುಳ್ಳು

ಪ್ರಶ್ನೆಃ38- ಪ್ರಾಸಾ.13 ಶಾಂತ ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು ಜಯಪುರ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಟ್ಟು ಇಲ್ಲಿ ಆಗುವುದಿಲ್ಲವೆಂದು ಬೇರೆ ಆಸ್ಪತ್ರೆಗೆ ಕರೆದುಕೊಂಡು ಹೋಗುವಂತೆ ತಿಳಿಸಿದರು ಎಂದು ನಂತರ ನಾವು ಆಕೆಯನ್ನು ಜಯಪುರ ಆಸ್ಪತ್ರೆಯಿಂದ ಕೊಪ್ಪ ಆಸ್ಪತ್ರೆಗೆ ಕರೆದುಕೊಂಡು ಹೋದೆವು. ಕೊಪ್ಪ ಆಸ್ಪತ್ರೆಯಲ್ಲಿ ಸ್ಕ್ಯಾನಿಂಗ್ ಮಾಡಿ ನೋಡಲಾಗಿ ಆಕೆಯು 3 ತಿಂಗಳ ಗರ್ಭವತಿ ಎಂದು ತಿಳಿಯಿತು. ವೈದ್ಯರು ಅಬಾರ್ಷನ್ ಮಾಡಿಸುವಂತೆ ಹೇಳಿದರು ಎಂದು, ಸಾಕ್ಷ್ಯ ನುಡಿದಿರುತ್ತಾರೆ.

ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ- ಗೊತ್ತಿಲ್ಲ

ಪ್ರಶ್ನೆಃ39- ಪ್ರಾಸಾ.13 ಶಾಂತ ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು ತಾನು ತನ್ನ ಮಗಳಲ್ಲಿ ಯಾಕೆ ಹೀಗೆ ಮಾಡಿಕೊಂಡೆ ಎಂದು ಕೇಳಲಾಗಿ, ತನ್ನ ಮಗಳು ಆರೋಪಿಯಾದ ನೀನು ಆಕೆಗೆ ಗರ್ಭಪಾತ ಮಾಡಿಕೊಳ್ಳುವಂತೆ, ಮಾಡಿಕೊಳ್ಳದೇ ಇದ್ದಲ್ಲಿ ಊರಿನಲ್ಲಿ ಮರ್ಯಾದೆ ಹೋಗುತ್ತದೆ ಎಂದು ಹೇಳಿ, ಆಕೆಗೆ ಗರ್ಭಪಾತ ಆಗುವ ಮಾತ್ರೆ ತಂದುಕೊಟ್ಟನೆಂದು ತಿಳಿಸಿದಳು ಹಾಗೂ ಆಕೆ ತಾನು ಮಾತ್ರೆಯನ್ನು ಸೇವಿಸಿದ್ದಾಗಿ ತಿಳಿಸಿದಳು ಎಂದು, ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ- ಸುಳ್ಳು

ಪ್ರಶ್ನೆಃ40- ಪ್ರಾಸಾ.13 ಶಾಂತ ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು ಕೊಪ್ಪ ವೈದ್ಯರಾದ ಬಾಲಕೃಷ್ಣರವರು ಆಕೆಗೆ ಚಿಕಿತ್ಸೆ ಕೊಟ್ಟರು ಮತ್ತು ನಮಗೆ ಆಕೆಗೆ ಇಲ್ಲಿ ಚಿಕಿತ್ಸೆ ಆಗುವುದಿಲ್ಲವೆಂದು ಶಿವಮೊಗ್ಗ ಮೆಗ್ಗಾನ್ ಆಸ್ಪತ್ರೆಗೆ ಕರೆದುಕೊಂಡು ಹೋಗುವಂತೆ ತಿಳಿಸಿದರು ಎಂದು , ತನ್ನ ಮಗಳನ್ನು ಕೊಪ್ಪ ಆಸ್ಪತ್ರೆಯಿಂದ ಆಂಬುಲೆನ್ಸಿನಲ್ಲಿ ಶಿವಮೊಗ್ಗ ಮೆಗ್ಗಾನ್ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು, ಮೆಗ್ಗಾನ್ ಆಸ್ಪತ್ರೆಯಲ್ಲಿ ಆಕೆಯು 3 ದಿನಗಳ ಕಾಲ ಚಿಕಿತ್ಸೆ ಪಡೆದಿದ್ದು , 3 ದಿನಗಳ ನಂತರ ಆಕೆಯು ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾಳೆ ಎಂದು, ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ- ಗೊತ್ತಿಲ್ಲ

ಪ್ರಶ್ನೆಃ41- ಪ್ರಾಸಾ.13 ಶಾಂತ ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು ತನ್ನ ಮಗಳು ಆರೋಪಿಯಾದ ನೀನು ತಂದು ಕೊಟ್ಟ ಗರ್ಭಪಾತ ಮಾತ್ರೆ ತಿಂದಿದ್ದರಿಂದಾಗಿ ಮರಣ ಹೊಂದಿದ್ದಾಳೆ ಎಂದು, ಈ ಬಗ್ಗೆ ತನ್ನ ತಮ್ಮ ಪೊಲೀಸರಿಗೆ ದೂರನ್ನು ಕೊಟ್ಟಿರುತ್ತಾನೆ ಎಂದು, ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ- ಸುಳ್ಳು

ಪ್ರಶ್ನೆಃ42- ಪ್ರಾಸಾ.13 ಶಾಂತ ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು ನಂತರ ಪೊಲೀಸರು ತಮ್ಮ ಮನೆಯ ಬಳಿ ಬಂದು ನಮ್ಮನ್ನು ಹೇಗಾಯಿತು, ಏನಾಯಿತು ಎಂಬ ಬಗ್ಗೆ ವಿಚಾರಿಸಿ , ಮಹಜರ್ ಕ್ರಮ ಜರುಗಿಸಿ ನಿ.ಪಿ.9 ಫೋಟೋ ತೆಗೆದರು ಎಂದು, ನಿ.ಪಿ.2 ರ ಫೋಟೋದಲ್ಲಿ ಇರುವ ಶವ ನನ್ನ ಮಗಳದ್ದು ಎಂದು ನೋಡಿ ಗುರುತಿಸಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ- ಸುಳ್ಳು

ಪ್ರಶ್ನೆಃ43- ಪ್ರಾಸಾ.14 ಕೆ. ಸತೀಶ ಪಿ ಎಸ್ ಐ ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ದಿನಾಂಕಃ 18-11-2019 ರಂದು ಈ ಕೇಸಿನ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ-22-ಎ.ಎಸ್.ಐ.ಸೂರಪ್ಪರವರಿಂದ ಪಡೆದು ಪರಿಶೀಲಿಸಿ , ಅದೇ ದಿನ ಎಫ್.ಎಸ್.ಎಲ್.ನಿಂದ ಬಂದ ನಿ.ಪಿ.16 ಮತ್ತು 17 ರ ವರದಿಯನ್ನು ಸ್ವೀಕರಿಸಿ, ಕಡತಕ್ಕೆ ಅಳವಡಿಸಿಕೊಂಡು ದಿನಾಂಕಃ 25-11-2019 ರಂದು ಮೃತೆಯ ಸಾವಿನ ಬಗ್ಗೆ ಅಂತಿಮ ಅಭಿಪ್ರಾಯ ವರದಿಯನ್ನು ನೀಡಲು, ಪಿ.ಎಂ. ವರದಿ ಹಾಗೂ ಎಫ್.ಎಸ್.ಎಲ್. ವರದಿಯನ್ನು ಲಗತ್ತಿಸಿ ಮೆಗ್ಗಾನ್ ಆಸ್ಪತ್ರೆ ಶಿವಮೊಗ್ಗ ಇವರಿಗೆ ಮನವಿಯನ್ನು ಸಲ್ಲಿಸಿರುತ್ತೇನೆ ಎಂದು, ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ- ಗೊತ್ತಿಲ್ಲ

ಪ್ರಶ್ನೆಃ44- ಪ್ರಾಸಾ.14 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು ದಿನಾಂಕಃ 01-12-2019 ರಂದು ಮೃತೆಯ ಸಾವಿನ ಬಗ್ಗೆ ಅಂತಿಮ ಅಭಿಪ್ರಾಯ ನೀಡಲು, ಕೊಪ್ಪ ಸರ್ಕಾರಿ ಆಸ್ಪತ್ರೆಯಿಂದ ಮೃತೆಯ ಎಂ.ಎಲ್.ಸಿ. ಕೇಸ್ ಶೀಟ್ ದಾಖಲಾತಿಯನ್ನು ನೀಡುವಂತೆ ಕೋರಿ ಮನವಿ ಪತ್ರವನ್ನು ಸಲ್ಲಿಸಿ ನಂತರ, ಚಿಕ್ಕಮಗಳೂರು ಜಿಲ್ಲಾ ಆರೋಗ್ಯ ಅಧಿಕಾರಿಯವರಿಗೆ ದೂರವಾಣಿ ಮೂಲಕ ದಾಖಲಾತಿಗಳ ಬಗ್ಗೆ ವಿಚಾರ ಮಾಡಲಾಗಿ, ಮೃತೆಯ ಎಫ್ ಎಸ್ ಎಲ್ ವರದಿ ಹಾಗೂ ಪಿ ಎಂ ವರದಿಯನ್ನು ನೋಡಿ ಅಭಿಪ್ರಾಯವನ್ನು ಕೊಡಬಹುದು ಎಂದು ತಿಳಿಸಿರು ತ್ತಾರೆ ಎಂದು, ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ- ಗೊತ್ತಿಲ್ಲ

ಪ್ರಶ್ನೆ:45- ಪ್ರಾಸಾ.14 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು ದಿನಾಂಕ: 05-05-2020 ರಂದು ಮೆಗ್ಗಾನ್ ಆಸ್ಪತ್ರೆ ಶಿವಮೊಗ್ಗ ಇವರಿಂದ ಮೃತೆಯ ಸಾವಿನ ಬಗ್ಗೆ ನಿ.ಪಿ.25 ಅಂತಿಮ ಅಭಿಪ್ರಾಯ ವರದಿ ಬಂದಿದ್ದು, ಸದರಿ ವರದಿಯಲ್ಲಿ "death was due to septicaemia" ಎಂದು ಇರುತ್ತದೆ. ನಿ.ಪಿ.26 ರ ಅಭಿಪ್ರಾಯ ವರದಿಯಲ್ಲಿ ಮೃತೆಯ ಸಾವು "with the details available, it is not possible to decipher whether the Septicaemia resulted in Miscarriage or miscarriage complicated to Septicaemia" ಎಂದು ಇರುತ್ತದೆ ಎಂದು, ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ:- ಗೊತ್ತಿಲ್ಲ

ಪ್ರಶ್ನೆ:46- ಪ್ರಾಸಾ.14 ಇವರು ತಮ್ಮ ಮುಖ್ಯ ಸಾಕ್ಷ್ಯದಲ್ಲಿ ಮುಂದುವರೆದು ನಂತರ ಅದೇ ದಿನ ದಿನಾಂಕ: 05-05-2020 ರಂದು ಪಿಸಿ-ಧರ್ಮರಾಜ್ ರವರಿಂದ ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ-65-ಬಿ ರಂತೆ ನಿ.ಪಿ. 27 ರಂತೆ ದೃಢೀಕರಣ ಪತ್ರವನ್ನು ಪಡೆದು ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತೇನೆ ಎಂದು , ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ:- ಗೊತ್ತಿಲ್ಲ

ಪ್ರಶ್ನೆ:47- ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ನೀವು ಏನಾದರೂ ಹೇಳಲು ಇಚ್ಛಿಸುವಿರಾ?

ಉತ್ತರ:- ಇಲ್ಲ

ಪ್ರಶ್ನೆ:48- ನಿಮ್ಮ ಪರವಾಗಿ ಯಾರಾದರೂ ಸಾಕ್ಷಿದಾರರನ್ನು ವಿಚಾರಣೆ ಮಾಡುತ್ತೀರಾ ಅಥವಾ ಯಾವುದಾದರೂ ದಾಖಲಾತಿ ಗಳನ್ನು ಹಾಜರುಪಡಿಸುತ್ತೀರಾ?

ಉತ್ತರ:- ಇಲ್ಲ. ನಾನೇನು ತಪ್ಪು ಮಾಡಿಲ್ಲ ಸುಳ್ಳು ಕೇಸು ದಾಖಲಿಸಿದ್ದಾರೆ

(ದಿನಾಂಕ:29 ನೇ ದಿವಸ ಡಿಸೆಂಬರ್ ಮಾಹೆಯ 2025 ರಂದು ತೆರೆದ ನ್ಯಾಯಾಲಯದಲ್ಲಿ ಸದರಿ ಸಾಕ್ಷ್ಯವನ್ನು ಆರೋಪಿಗೆ ಓದಿ ಹೇಳಿ ಆತನು ನೀಡಿದ ಉತ್ತರವನ್ನು ದಾಖಲುಮಾಡಿಕೊಳ್ಳಲಾಯಿತು. )

ಸಹಿ
(ರಾಜೇಶ್ವರಿ ಎನ್.ಹೆಗಡೆ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

NOTE:

In this case, there is one accused. Statement U/S.313 Cr.P.C., is get ready by the Court which runs into 59 pages. Due to paucity of time for recording statement of accused, to save the court time, court co-ordinator is appointed with the consent of learned counsel for accused. Sri K.B.Rajashekharaiah, KAR/1958/2000 Advocate, Chikkamagalur, is appointed as Court Co-ordinator.

(ದಿನಾಂಕ 29 ನೇ ದಿವಸ ಡಿಸೆಂಬರ್ ಮಾಹೆಯ 2025 ರಂದು ಸದರಿ ಸಾಕ್ಷ್ಯವನ್ನು ಆರೋಪಿತನಿಗೆ ಕೋರ್ಟ ಕೋ-ಆರ್ಡಿನೇಟರ್ ಓದಿ ಹೇಳಿ ಆತನು ನೀಡಿದ ಉತ್ತರವನ್ನು ದಾಖಲು ಮಾಡಿಕೊಳ್ಳಲಾಗಿದೆ ಎಂದು ದೃಢೀಕರಿಸಿ, ತಮ್ಮ ಸಹಿ ಮಾಡಿರುತ್ತಾರೆ )

ಸಹಿ
ಕೆ.ಬಿ. ರಾಜಶೇಖರಯ್ಯ , ವಕೀಲರು,
ಕೋರ್ಟ ಕೋ-ಆರ್ಡಿನೇಟರ್.
ಚಿಕ್ಕಮಗಳೂರು.

ಸಹಿ
(ರಾಜೇಶ್ವರಿ ಎನ್. ಹೆಗಡೆ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಎಂವಿಪಿ